**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.</u>**

**<u>ಸಿ.ಸಿ. ನಂ. 471/2016</u>**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಗೋವಿಂದಪ್ಪ | ಸಿ.ಡಬ್ಲ್ಯೂ-06 |
| ತಂದೆಯ ಹೆಸರು | : | ಕರೆಚಿಕ್ಕಣ್ಣ | ಪಿ.ಡಬ್ಲ್ಯೂ-04 |
| ವಯಸ್ಸು | : | 53 ವರ್ಷ | |
| ಉದ್ಯೋಗ | : | ಚಾಲಕ | |
| ವಾಸಸ್ಥಳ | : | ಡಿ.ಉಪ್ಪಾರಹಟ್ಟಿ | ದಿಃ 21-01-2026. |

**<u>ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ</u>**

ಆರೋಪಿ ನನಗೆ ಗೊತ್ತು .

ಆರೋಪಿಗೂ ನನ್ನ ನಡುವೆ ಯಾವುದೇ ವ್ಯವಹಾರ ಇರಲಿಲ್ಲ. ಪೊಲೀಸರು ನಾನು ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಯು ನಿಪಿ.24 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.24(ಎ) ಅಂತ ಗುರುತಿಸಲಾಯಿತು. ಆರೋಪಿಯ ತಾಯಿಯ ಹತ್ತಿರ ಬಡ್ಡಿಗೆ ಹಣವನ್ನು ಪಡೆದಾಗ ನಿಪಿ.24 ಅನ್ನು ಬರೆದುಕೊಟ್ಟಿರುತ್ತೇನೆ. ಸದರಿ ಹಣವನ್ನು ನಾನು ಮರು ಪಾವತಿಸಿರುತ್ತೇನೆ.

**( ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ</u>**

2007 ರಲ್ಲಿ ನಾನು ಆರೋಪಿಯ ಹತ್ತಿರ ತಿಂಗಳಿಗೆ ಶೇ.4/- ರೂ. ಬಡ್ಡಿ ದರದಂತೆ 50,000/- ಹಣ ಪಡೆದಿದ್ದೆ ಎಂದರೆ ಸರಿಯಲ್ಲ. ಸದರಿ ಹಣದ ಭದ್ರತೆಗಾಗಿ ಆರೋಪಿಯು ಸೂಚಿಸಿದ ಮೇರೆಗೆ ಆರೋಪಿಯ ತಾಯಿಯ ಹೆಸರಿಗೆ ನಿಪಿ.24 ಅನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಚಸಾ-1 ರವರು ಆರೋಪಿಯ ಮೇಲೆ ದಾಳಿ ನಡೆಸಿದಾಗ ನಿಪಿ.24 ದೊರೆತಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಾನು ಹಣವನ್ನು ವಾಪಸ್ಸು ನೀಡಿರುತ್ತೇನೆ ಎಂದು ನುಡಿಯುತ್ತಾರೆ .

ದಿನಾಂಕಃ 19.10.2015 ರಂದು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯನ್ನು ಈಗಾಗಲೇ ನಿಪಿ.12 ಎಂದು ಗುರುತಿಸಲಾಗಿರುತ್ತದೆ.

ಎಲ್ಲಾ ವಿಚಾರ ಗೊತ್ತಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಸ್ ಡಿ ಹೆಚ್., ಆರೋಪಿ ಪರ ವಕೀಲರಿಂದಃ**

ಆರೋಪಿಯು ಎಂದಿಗೂ ಮೀಟರ್ ಬಡ್ಡಿ ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ